# ಶಾಸನಗಳಲ್ಲಿ ಯಕ್ಷಿ ಆರಾಧನೆ

**ಶ್ರೀಧರಮೂರ್ತಿ ಕೆ. ಯು.**

ಕನ್ನಡ ಉಪನ್ಯಾಸಕರು, ಮಂದಾರ ಸ್ವತಂತ್ರ ಪದವಿ ಪೂರ್ವ ಕಾಲೇಜು,
ನೀಲಾನಹಳ್ಳಿ, ದೊಡ್ಡಬಾತಿ, ದಾವಣಗೆರೆ.

**Received: 03/10/2024 ; Acepted: 10/11/2024 ; Published: 06/12/2024**

**DOI: https://doi.org/10.5281/zenodo.14289873**

## ABSTRACT:

ಜೈನರಲ್ಲಿ ಯಕ್ಷಿ ಆರಾಧನೆಯನ್ನು ನೋಡುವುದಾದರೆ ಯಕ್ಷಿ ಪೂಜೆಯನ್ನು ಬೌದ್ಧ ಮತ್ತು ಜೈನಧರ್ಮದಲ್ಲಿ ಅದರಲ್ಲಿಯೂ ಸ್ತ್ರೀಯರಿಗೆ ಅಷ್ಟಾಗಿ ಪ್ರಾಮುಖ್ಯತೆ ಕೊಟ್ಟಿರಲಿಲ್ಲ. ಮೊದಲು ಬೌದ್ಧಧರ್ಮದಲ್ಲಿ ಆರಂಭವಾಗಿ ನಂತರದಲ್ಲಿ ಯಕ್ಷಿ ಆರಾಧನೆಯು ಜೈನಧರ್ಮದ ಪ್ರವೇಶಪಡೆಯಿತು. ಜೈನರಲ್ಲಿ ಆಚಾರ್ಯರಿಗೆ ಇರುವಷ್ಟು ಪ್ರಾಧಾನ್ಯತೆ ಸನ್ಯಾಸಿನಿಯರಿಗಿರಲಿಲ್ಲ. ಕಾಲಾಂತರದಲ್ಲಿ ಬದಲಾವಣೆಗೊಂಡು ಜೈನರಿಗೆ ಶಕ್ತಿ ದೇವತೆಗಳ ಪ್ರವೇಶವು ತಂತ್ರ ರೂಪದಲ್ಲಿ, ಸ್ತ್ರೀ ರೂಪದಲ್ಲಿ ಕಂಡುಬರುತ್ತದೆ. ಜೈನರಲ್ಲಿ ಪದ್ಮಾವತಿ, ಬೌದ್ಧರಲ್ಲಿ ತಾರಾಭಗವತಿ ಪ್ರಮುಖ ಶಕ್ತಿ ದೈವಗಳಾಗಿ ಜನಪ್ರಿಯರಾದರು.

ತೀರ್ಥಂಕರರು ಕೇವಲ ಜ್ಞಾನಿಯಾಗಿರುವ ಮುನ್ನ ಆತ್ಮ ಕಲ್ಯಾಣಕ್ಕಾಗಿ ತಪಸ್ಸಿನಲ್ಲಿ ನಿರತರಾಗಿದ್ದಾಗ ಆಕಸ್ಮಿಕವಾಗಿ ಅನೇಕ ಉಪಸರ್ಗಗಳು ಎದುರಾಗುವುದು ಉಂಟು. ಅದು ಪೂರ್ವಕೃತ ಕರ್ಮದ ಫಲವಾಗಿ ಇರಬಹುದು ಅಥವಾ ಪ್ರಾಕೃತಿಕ ವಿಕೋಪಗಳಿಂದ, ದುಷ್ಟಶಕ್ತಿ, ಪ್ರಾಣಿಗಳಿಂದ ಉಂಟಾಗುವ ತೊಂದರೆ ಇರಬಹುದು. ಆ ಉಪಸರ್ಗಗಳನ್ನು ಯಕ್ಷ ಯಕ್ಷಿಯರು ನಿವಾರಿಸಿ ಮೋಕ್ಷದ ಹಾದಿಯತ್ತ ಸುಗಮವಾಗಿ ಸಾಗಲು ಅನುವು ಮಾಡಿಕೊಡುವರು. ಇಪ್ಪತ್ತನಾಲ್ಕು ಜನ ತೀರ್ಥಂಕರರಿಗೂ ಮೂರ್ತಿಯ ಬಲಭಾಗದಲ್ಲಿ ಯಕ್ಷನು ಎಡಭಾಗದಲ್ಲಿ ಯಕ್ಷಿಯೂ ಇರುತ್ತಾರೆ. ತೀರ್ಥಂಕರರ ಜೊತೆಯಲ್ಲಿಯೇ ಇವರೂ ಸಹ ದೇವತಾ ಸ್ಥಾನವನ್ನು ಪಡೆದುಕೊಂಡಿದ್ದು, ಪೂಜೆಗೆ ಅರ್ಹರಾಗಿ ಯಕ್ಷಿಯರು ಜೈನರಲ್ಲಿ ಪೂಜೆಗೊಳ್ಳುತ್ತಾರೆ.

## KEYWORDS:

ಪದ್ಮಾವತಿ, ಚಕ್ರೇಶ್ವರಿ, ಜ್ವಾಲಮಾಲಿನಿ, ಕೂಷ್ಮಾಂಡಿನಿ, ಏಲಾಚಾರ್ಯ, ಬೊಮ್ಮಲಮ್ಮ, ಕಂಚಲದೇವಿ, ಸಉಸೆ.

ಯಕ್ಷಿಯರಿಗೆ ಜೈನ ಸಂಪ್ರದಾಯದಲ್ಲಿ ಉನ್ನತ ಸ್ಥಾನ ದೊರೆಯಲು ಅವರು ಪೂಜೆಗೆ ಅರ್ಹಗೊಂಡು ಅವರ ಬಗೆಗಿನ ಸ್ತುತಿ ಸ್ತೋತ್ರ ಹಾಡುಗಳು ರಚನೆಯಾಗಲು ಆ ಧರ್ಮದ ಮೂಲ ತತ್ವಗಳಲ್ಲುಂಟಾದ ಬದಲಾವಣೆಯೇ ಕಾರಣವೆನ್ನಬಹುದು. ಜೈನಧರ್ಮದ ಮೂಲ ತತ್ವದ ಪ್ರಕಾರ ಅದರಲ್ಲೂ ದಿಗಂಬರ ಸಂಪ್ರದಾಯದ ಪ್ರಕಾರ ಮುಕ್ತಿಯನ್ನು ಪಡೆಯುವವರು ಪುರುಷರು. ಪುರುಷರು ಮಾತ್ರವೇ ಗೌರವ ಆರಾಧನೆಗಳಿಗೆ ಅರ್ಹರೆಂಬ ದೃಢ ನಂಬಿಕೆಯೊಂದಿತ್ತು. ಆದರೆ ಜನ ಸಾಮಾನ್ಯರಿಗೆ ಉಪಕಾರಿಗಳಾಗಿ ಅವರು ಪೂಜೆಯನ್ನು ಕೈಗೊಳ್ಳುವ ದೈವಗಳೆಂದರೆ ಸಾಮಾನ್ಯವಾಗಿ ಸ್ತ್ರೀ ದೇವತೆಗಳಾಗಿ ಶಾಕ್ತಕ್ಕೆ ಹತ್ತಿರವಾಗಿ ಕಾಣಿಸುತ್ತವೆ.

ಜೈನಧರ್ಮವು ಜನಸಾಮಾನ್ಯರ ಲೌಕಿಕ ಬಯಕೆಗಳನ್ನು ತಿರಸ್ಕರಿಸದೆ ಒಪ್ಪಿ ಪುರಸ್ಕರಿಸಿತು. ಆದ್ದರಿಂದ ಮಾತೃದೇವತಾ ಆರಾಧನೆಗಳು ಜೈನರಿಗೆ ಹೊಸದಾದರೂ, ಜನಸಾಮಾನ್ಯರ ದೃಷ್ಟಿಯಿಂದ ಜೈನ ಧರ್ಮವು ಯಾಪನಿಯರ ನಂತರದಲ್ಲಿ ಮಾತೃದೇವತಾ ಆರಾಧನೆಯನ್ನು ಆರಂಭಿಸಿತ್ತು. ಆದ್ದರಿಂದ ತೀರ್ಥಂಕರರಿಗೆ ಸಲ್ಲಬೇಕಾದ ಪೂಜೆಯ ಜೊತೆಯಲ್ಲಿ ಅವನ ಪಕ್ಕದ ದೇವತೆಗಳಾದ ಯಕ್ಷಿಗೂ ಸಮಾನವಾದ ಪೂಜೆ ಸಲ್ಲಿಸಲು ಆರಂಭವಾಯಿತು. ಅಲ್ಲದೆ ಜೈನರ ಕುಲದೇವತೆಗಳಾಗಿ ಪದ್ಮಾವತಿ, ಚಕ್ರೇಶ್ವರಿ, ಜ್ವಾಲಮಾಲಿನಿ, ಕೂಷ್ಮಾಂಡಿನಿ, ಗೌರಿ ಮೊದಲಾದ ಜೈನ ವಂಶದಲ್ಲಿ ಪರಂಪರಾಗತವಾಗಿ ಪೂಜಿಸಿಕೊಂಡು ಬರುತ್ತಿರುವ ತೀರ್ಥಂಕರರ ಯಕ್ಷಿ ದೇವತೆಗಳಾಗಿವೆ. ಅಂದರೆ ಹಿಂದೆ ಇದ್ದ ಇಪ್ಪತ್ತನಾಲ್ಕು ಜನ ತೀರ್ಥಂಕರರ ಸಿದ್ಧಿಯ ಸಮಯದಲ್ಲಿ ಅವರಿಗೆ ಯಾವುದೇ ಆಪತ್ತು ಬರದಂತೆ ರಕ್ಷಕರಾಗಿ ಸ್ವ ಇಚ್ಛೆಯಿಂದ ಇರುತ್ತಿದ್ದರು. ಜೈನ ಗುರುಗಳು ಈ ಪೂಜಾ ಪದ್ಧತಿಯನ್ನು ಪುರಸ್ಕರಿಸಿದರು.

ಪಾರ್ಶ್ವನಾಥನ ಯಕ್ಷಿ ಪದ್ಮಾವತಿ ಹಾಗೂ ಚಂದ್ರಪ್ರಭನ ಯಕ್ಷಿ ಜ್ವಾಲಮಾಲಿನಿ ಜನಪ್ರಿಯರಾದರು. ಹುಂಚ, ಬೆಳಗಾವಿ, ಸವದತ್ತಿ, ಪದ್ಮಾವತಿಯ ಕ್ಷೇತ್ರಗಳಾದರೆ, ಗೇರುಸೊಪ್ಪೆ, ಜ್ವಾಲಾಮಾಲಿನಿಯ ಕ್ಷೇತ್ರವಾಗಿದೆ. ಜೈನಾಚಾರ್ಯರಾದ ಏಲಾಚಾರ್ಯ, ಮಲ್ಲಿಷೇಣ ಸೂರಿ, ಇಂದ್ರನಂದಿ ಇವರು ತಾಂತ್ರಿಕರು ಯಕ್ಷಿಯ ಆರಾಧಕರೂ ಆಗಿದ್ದರು. ಯಕ್ಷಿಯರಿಗೆ ಮೂರ್ತಿ ರೂಪ ಸಿಕ್ಕು ಬಸದಿಗಳು ವ್ರತಗಳು ರೂಪಗೊಂಡವು. ಜೈನರಲ್ಲಿ ಪದ್ಮಾವತಿ ನಿತ್ಯಬದುಕಿನಲ್ಲಿ ಬವಣೆ ಪಡುವ ಜನರ ಬದುಕಿನಲ್ಲಿ ಬೇರುಬಿಟ್ಟಳು. ಅವಳ ಕುರಿತು ವ್ರತವನ್ನು ಆಚರಿಸುವವರು ಮಹಿಳೆಯರೇ ಆಗಿದ್ದಾರೆ. ಅವಳ ಮೇಲೆ ಸಿಕ್ಕಿರುವ ಹಾಡುಗಳು ಸ್ತ್ರೀಯರು ರಚಿಸಿರುವ ಹಾಡುಗಳಾಗಿವೆ. ಜೈನ ಸ್ತ್ರೀಯರು ತಮ್ಮ ಲೌಕಿಕ ಬೇಡಿಕೆಗಳನ್ನು ಅಲೌಕಿಕ ಪಂಥದಲ್ಲಿ ಸಾಗಿದ ತೀರ್ಥಂಕರರ ಮುಂದಿಡದೆ ಯಕ್ಷಿಯರ ಮುಂದೆಯೇ ಮಂಡಿಸಿದರು.

ಸ್ತ್ರೀಯರಲ್ಲಿ ಯಕ್ಷಿ ಆರಾಧನೆಯ ಉದ್ದೇಶ ಸಂತಾನ ಭಾಗ್ಯ ಪಡೆಯುವುದೇ

ಹೆಚ್ಚಾಗಿದೆ. ನೇಮಿಚಂದ್ರನ 'ಲೀಲಾವತಿ ಪ್ರಬಂಧದ' ನಾಯಕಿ ಪದ್ಮಾವತಿ ಪ್ರಸಾದದಿಂದ ಹುಟ್ಟಿದವಳು. ಕೆಲವು ಅರಸು ಕುಲಗಳು ಮಹಾಮಂಡಳೇಶ್ವರರು ಮಹಾ ಸಾಮಂತರು ಯಕ್ಷಿ ಪದ್ಮಾವತಿ ದೇವಿಯು ಕರುಣಿಸಿದ ವರ ಪ್ರಸಾದದಿಂದ ತಾವು ಸುಖ ಪರಂಪರೆಯನ್ನು ಪಡೆದಿದ್ದಾಗಿ ಹೆಮ್ಮೆಯಿಂದ ಹೇಳಿಕೊಂಡಿರುವುದನ್ನು ಕೆಲವು ಶಾಸನಗಳು ಸ್ಪಷ್ಟಪಡಿಸುತ್ತವೆ.[1]

ಪುತ್ತೂರು ತಾಲೂಕಿನ ಕಡಬ ಸೀಮೆಗೆ ಸೇರಿದ ಒಂದು ಗ್ರಾಮ ಬಂಟ್ರ. ಈ ಗ್ರಾಮದ ಸಮೀಪದ ಮರ್ದಾಳ ಗ್ರಾಮದ ಜೈನರ ಬಲ್ಲಾಳ ಬೀಡಿನ ಬಸದಿಯಲ್ಲಿ ಅತ್ಯಂತ ಮೋಹಕವಾಗಿ ಕಡೆಯಲ್ಪಟ್ಟ ಕಂಚಿನ ಪದ್ಮಾವತಿ ವಿಗ್ರಹವು ಪೂಜೆಗೊಳ್ಳುತ್ತಿದೆ.[2] ಈ ವಿಗ್ರಹವು ೮-೯ನೇ ಶತಮಾನಕ್ಕೆ ಸೇರುತ್ತದೆ ಎಂದು ವಿದ್ವಾಂಸರು ತಿಳಿಸಿದ್ದಾರೆ.

ಕ್ರಿ.ಶ. ೯೫೦ರ ಜಿನವಲ್ಲಭನ ಶಾಸನವು ಅತ್ಯಂತ ಮಹತ್ವದಾಗಿದೆ. ಈ ಶಾಸನದ ಮೇಲೆ ಜೈನ ದೇವತೆಯಾದ ಚಕ್ರೇಶ್ವರಿಯನ್ನು ಕಂಡರಿಸಲಾಗಿದೆ. ಅದರ ಮೇಲೆ ಎರಡು ಜಿನ ಬಿಂಬಗಳನ್ನು ಕೆತ್ತಲಾಗಿದೆ. ಚಕ್ರೇಶ್ವರಿಯು ವಿವಿಧ ಆಯುಧಗಳು ಆಭರಣಗಳೊಂದಿಗೆ ಗರುಡವಾಹನದ ಮೇಲೆ ನೆಲೆಸಿದ್ದಾಳೆ. ಆಕೆಯನ್ನು ಇಲ್ಲಿನ ಜನಪದರು ಬೊಮ್ಮಲಮ್ಮ (ಗೊಂಬೆಗಳ ಅಮ್ಮ ) ಎಂದು ಕರೆದಿದ್ದಾರೆ.

ಕ್ರಿ.ಶ. ೧೦೭೧ರ ಧಾರವಾಡ ಜಿಲ್ಲೆಯ ಗಾವರವಾಡದ ಶಾಸನದಲ್ಲಿ ಕಲ್ಯಾಣ ಚಾಲುಕ್ಯರ ಭುವನೈಕ್ಯಮಲ್ಲ ಹಿಮ್ಮಡಿ ಸೋಮೇಶ್ವರನ ಆಳ್ವಿಕೆಗೆ ಒಳಪಟ್ಟ ಮಯೂರಾವತಿ ಪುರದ ಒಡೆಯನಾದ ಕಾಟರಸನು ಜ್ವಾಲಿನೀ ಲಬ್ಧ ವರ ಪ್ರಸಾದ ಎಂದು ಹೇಳಿಕೊಂಡು ಶ್ರವಣಬೆಳಗೊಳದ ಚಿಕ್ಕ ಬೆಟ್ಟದಲ್ಲಿ ಕಳ್ತಲೆ ಬಸದಿಯನ್ನು ಕಟ್ಟಿಸಿರಬೇಕೆಂದು ಶಾಸನ ತಿಳಿಸುತ್ತದೆ.[3] ಯಕ್ಷಿಯಾಗಿರುವ ಜ್ವಾಲಾಮಾಲಿನಿಯು ಬೆಳ್ವಲ ನಾಡಿನೊಳಗೆ ಪ್ರಸಿದ್ಧಳಾದ ದೇವತೆಯಾಗಿದ್ದಳೆಂದು ತಿಳಿದುಬರುತ್ತದೆ. ಖ್ಯಾತ ಕುಂತಳಾ ದೇಶದಲ್ಲಿ ಒಂದು ಗಣ್ಯನಾಡು ಬೆಳ್ವಲ ವಿಷಯಕ್ಕೆ ರಾಜಧಾನಿ ಅಣ್ಣಿಗೆರೆಯಾಗಿದೆ.

ಕ್ರಿ.ಶ. ೭೫೧-೭೫೨ರ ಅಣ್ಣಿಗೆರೆ ಶಾಸನದ ಪ್ರಕಾರ ಪ್ರಸಿದ್ಧ ಜೈನಕೇಂದ್ರವಾಗಿತ್ತು. ಈ ಪ್ರದೇಶದಲ್ಲಿ ಗಂಗರು, ರಟ್ಟರು, ಚಾಲುಕ್ಯರು ಆಳ್ವಿಕೆ ನಡೆಸಿದ್ದರು.[4] ಈ ಕಾಲಕ್ಕಾಗಲೇ ಚೈತ್ಯ ಮಂದಿರದಲ್ಲಿ ಯಕ್ಷಿಯ ಮೂರ್ತಿಗಳು ಪ್ರಭಾವ ಶಾಲಿಗಳಾಗಿ ಪೂಜೆಗೊಳ್ಳುತ್ತಿದ್ದವು.[5]

ಕ್ರಿ.ಶ. ೧೦೦೭ರಲ್ಲಿ ಗದಗ ತಾಲ್ಲೂಕಿನ ಲಕ್ಕುಂಡಿ ಶಾಸನದ ಪ್ರಕಾರ ಲಕ್ಕುಂಡಿಯ ಬ್ರಹ್ಮ ಜಿನಾಲಯದ ಆವರಣದೊಳಗಿದ್ದ ಪದ್ಮಾವತಿ ದೇವಿಯ ಗುಡಿಯು ಪ್ರಸಿದ್ಧವಾಗಿತ್ತು.[6]

ಕ್ರಿ.ಶ. ೧೧೨೨ರ ಶಿವಮೊಗ್ಗದ ಕಲ್ಲೂರಗುಡ್ಡದ ಶಾಸನದಲ್ಲಿ ಸಿಂಹನಂದ್ಯಾಚಾರ್ಯ ಎಂಬ ಮುನಿಯು ಗಂಗವಂಶದ ಪದ್ಮಾನಾಭನ ಮಗನಾದ ಮಾಧವನಿಗೆ ವಿದ್ಯಾಭ್ಯಾಸ ಮಾಡಿಸಿ ಪದ್ಮಾವತಿಯನ್ನು ಆಹ್ವಾನಿಸಿ, ಆರಾಧಿಸಿ ಆಕೆಯಿಂದ ಖಡ್ಗವನ್ನು ಪಡೆದು ಮಾಧವನಿಗೆ ನೀಡಿ ಜೊತೆಗೆ ರಾಜ್ಯವನ್ನು ನೀಡಿದನು. ಅಲ್ಲದೆ ಇದೇ ಶಾಸನದಲ್ಲಿ ನನ್ನಿಯಗಂಗನ ಪತ್ನಿ ಕಂಚಲದೇವಿಯು ಪದ್ಮಾವತಿಗೆ ಹರಕೆ ಹೊತ್ತು ಹೆಮ್ಮಡಿದೇವ ಎಂಬ ಮಗನನ್ನು ಪಡೆದಳೆಂದು ಶಾಸನವು ತಿಳಿಸುತ್ತದೆ.[6]

ಕ್ರಿ.ಶ. ೧೧೪೭ರ ಹುಂಚದ ಪಂಚಬಸ್ತಿ ಮುಂದೆ ತೋರಣಬಾಗಿಲಿನಲ್ಲಿರುವ ಶಾಸನದಲ್ಲಿ ಜಗದೇಕಮಲ್ಲನ ಆಶ್ರಯದಲ್ಲಿದ್ದ ಮಹಾಮಂಡಲೇಶ್ವರನಾದ ಶ್ರೀವಲ್ಲಭದೇವನು ಪದ್ಮಾವತೀದೇವಿಯು ನೀಡಿದ ವರ ಪ್ರಸಾದವನ್ನು ಪಡೆದು ೧೬ ಮಹಾ ದಾನಗಳನ್ನು ಮಾಡಿದನೆಂದು ಹೇಳಿದೆ.[7]

ಕ್ರಿ.ಶ. ೧೧೭೦ರ ಸೊರಬದ ತೆವರತೆಪ್ಪ ಗ್ರಾಮದ ಶಾಸನದಲ್ಲಿ ಮುನಿ ಚಂದ್ರದೇವರ ಗುರುವಾಗಿದ್ದ ಭಾನುಕೀರ್ತಿಸಿದ್ಧಾಂತ ದೇವನು ಮಹಿಮಾನ್ವಿತನಾಗಿದ್ದನು. ಇವನ ಹೆಸರು ಕೇಳಿದೊಡನೆಯೆ ಸಮಗ್ರ ದೇವತೆಗಳು ತಮ್ಮ ಪೀಠದಿಂದ ಎದ್ದು ಪಲಾಯನ ಮಾಡುತ್ತಿದ್ದರು. ಯಕ್ಷ, ರಾಕ್ಷಸ, ಗಂಧರ್ವ, ಪಿಶಾಚಿ, ಭೂತ, ಪಣಿ, ಬೇತಾಳಗಳು ಇವನ್ನು ಕಂಡೊಡನೆ ಹೆದರುತ್ತಿದ್ದರು. ಅತೃಪ್ತ ಭೂತಗಳನ್ನು ತನ್ನ ಯಂತ್ರ ಮಂತ್ರ ಶಕ್ತಿಗಳಿಂದ ಉದ್ಧರಿಸಿ ಅವುಗಳ ಪಾಪ ಪರಿಹಾರ ಮಾಡುತ್ತಿದ್ದನು. ಇವನು ಒಬ್ಬ ತಂತ್ರ ಯೋಗಿಯಾಗಿದ್ದನೆಂದು ಶಾಸನವು ತಿಳಿಸುತ್ತದೆ.[8]

ಕ್ರಿ.ಶ. ೧೬೭೫ರ ಸಂಸೆಯ ಶಾಸನದಲ್ಲಿ ಪದ್ಮರಾಜ ಹೆಗ್ಗಡೆಯ ವಶದಲ್ಲಿದ್ದ ತಾಮ್ರಶಾಸನದಲ್ಲಿ ಕೃಷ್ಣಪ್ಪನಾಯಕನ ಮಗ ವೆಂಕಟಾದ್ರಿನಾಯಕನು ಸಳುಸೆಯ ಗೌಡುಂಬಳಿಯಾಗಿ ೧೦ವರಹ, ದಂಡಿಗೆ ಉಂಬಳಿಯಾಗಿ ೬೦ ವರಹವನ್ನು ನೀಡಿ ಸಳುಸೆ ಪದ್ಮಾವತಿದೇವಿ ಅಂಮ್ಮನವರ ಪೂಜಾಕೈಂಕರ್ಯಗಳನ್ನು ನಡೆಸಿಕೊಂಡು ಬರಬೇಕೆಂದು ಹೇಳಿದೆ.[9]

೧೫ನೇ ಶತಮಾನದ ಆನೆವಾಳಿನ ಚಿಕ್ಕಣಗೌಡರ ಮಗ ಹೊನ್ನಣಗೌಡನು ತಮಗೆ ಮಗುವಾದಾಗ ಆ ಬೊಮ್ಮಣಗೌಡನಿಗೆ ಪುಣ್ಯವಾಗಬೇಕೆಂದು ಬ್ರಹ್ಮದೇವ ಎಂಬುವವನು ಪದ್ಮಾವತಿಯ ಬಸದಿಯನ್ನ ನಿರ್ಮಿಸಿದಂತೆ ಶಾಸನವು ತಿಳಿಸುತ್ತದೆ.[10] ಒಟ್ಟಾರೆಯಾಗಿ ಈರೀತಿಯಲ್ಲಿ ಅನೇಕ ಶಾಸನಗಳು ಯಕ್ಷಿ ಆರಾಧನೆಯ ಕುರಿತು ಮಾಹಿತಿ ನೀಡುತ್ತವೆ.

ಬೌದ್ಧ ಧರ್ಮದಲ್ಲಿ ಪ್ರಾಚೀನ ಕಾಲದಲ್ಲಿ ಬೌದ್ಧಮಾತೃದೇವತೆಗಳಂತಹ ಆರಾಧನೆ ಇದ್ದರೂ ನಂತರದ ಹಂತದಲ್ಲಿ ಜೈನಮುನಿಗಳ ತಪಸ್ಸಿನ ರಕ್ಷಣೆಯ ಜೊತೆ ಸನ್ಮಾರ್ಗ ದಾರಿತೋರಿಸುವ ದೇವತೆಯಾಗಿ ಯಕ್ಷಿಯರು ಕಂಡುಬರುತ್ತಿದ್ದರು. ಆದರೆ

ಬೌದ್ಧ ಮತ್ತು ಜೈನ ಧರ್ಮ ಅವನತಿಯ ಸಂದರ್ಭದಲ್ಲಿ ವೈದಿಕ ಪಂಥದ ಬೆಳವಣಿಗೆಗೆ ದೇವತೆಗಳು ಶಾಕ್ತ ಪರಂಪರೆಯಲ್ಲಿ ಬರುವ ಶಕ್ತಿದೇವತೆಗಳ ಕುರಿತು ಅನೇಕ ಪುರಾಣ–ಮಹಾತ್ಮೆಗಳ ರಚನೆಯ ನಂತರ ಶಾಕ್ತಿಯ ಅಂಶಗಳು ಮಂತ್ರಗಳು ತಂತ್ರಗಳಾಗಿ ಜನರಿಗೆ ಮೂಲ ಶಾಕ್ತನೆಲೆಯ ಅಂಶಗಳು ಬದಲಾಗುತ್ತಾ ಬಂದಿವೆ. ಹೀಗೆ ಶಕ್ತಿ ದೇವತೆಗಳು ಬೌದ್ಧ, ಜೈನ ಮತ್ತು ವೈದಿಕರಲ್ಲಿ ಶಾಕ್ತದೇವತೆಗಳು ಮಾನವನ ಮಾನಸಿಕ ಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತಾ ಬಂದಿವೆ. ಕಾಲಾಂತರ ಅವುಗಳ ಆಚರಣೆ–ನಂಬಿಕೆಗಳು ಬದಲಾಗಿವೆಯೇ ಹೊರತು ಮೂಲ ಅಂಶಗಳು ಹಾಗೆಯೇ ಉಳಿದಿವೆ.

**ಅಡಿ ಟಿಪ್ಪಣಿಗಳು:**

1. ಎಪಿಗ್ರಾಫಿಯ ಕರ್ನಾಟಿಕ-೧, ಸಂಪುಟ-೭. (೧೯೦೨). ಮೈಸೂರು ಗೌರ್ಮೆಂಟ್ ಸೆಂಟ್ರಲ್ ಪ್ರೆಸ್. ಬೆಂಗಳೂರು. ಪು.ಸಂ. ೯
2. ಚಿನ್ನಸ್ವಾಮಿ ಸೋಸಲೆ ಎನ್. (೨೦೧೪). ಕರಾವಳಿ ಕರ್ನಾಟಕದ ಜೈನ ಅರಸು ಮನೆತನಗಳು ಸಾಂಸ್ಕೃತಿಕ ಅಧ್ಯಯನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. ೧೨೮
3. ಎಪಿಗ್ರಾಫಿಯ ಇಂಡಿಕಾ: ಸಂಪುಟ XI–I. (೧೯೪೦). ಧಾರವಾಡ, ಅಣ್ಣೀಗೆರಿ, ಶಾಸನ ಸಂಖೆ. ೪೪–೪೭. ಪು.ಸಂ. ೯
4. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ XI–I. (೧೯೮೬). ಧಾರವಾಡ, ಶಾ.ಸಂ. ೫. ಪು.ಸಂ. ೩
5. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ XI–I. (೧೯೮೬). ಗದಗ, ಲಕ್ಕುಂಡಿ, ಶಾ. ಸಂ. ೫೨. ಪು. ಸಂ. ೩೯–೪೩
6. ಕನಾಟಕದ ಜೈನ ಶಾಸನ ಸಂಪುಟ–೩. (೨೦೧೯). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಶಿವಮೊಗ್ಗ, ಶಾ.ಸಂ. ೪. ಪು.ಸಂ. ೯
7. ಕನಾಟಕದ ಜೈನ ಶಾಸನ ಸಂಪುಟ–೩. (೨೦೧೯). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಹೊಸನಗರ (ಹುಂಚ). ಶಾ.ಸಂ. ೪೨. ಪು.ಸಂ. ೧೩೪
8. ಕನಾಟಕದ ಜೈನ ಶಾಸನ ಸಂಪುಟ–೩. (೨೦೧೯). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಸೊರಬ(ತೆವರತೆಪ್ಪ ). ಶಾ.ಸಂ. ೧೩೨. ಪು.ಸಂ. ೨೯
9. ಕನಾಟಕದ ಜೈನ ಶಾಸನ ಸಂಪುಟ–೨. (೨೦೧೯). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಚಿಕ್ಕಮಂಗಳೂರು, ಮೂಡಿಗೆರೆ. ಶಾ.ಸಂ. ೩೦೫. ಪು.ಸಂ. ೪೨೬
10. ಕನಾಟಕದ ಜೈನ ಶಾಸನ ಸಂಪುಟ–೨. (೨೦೧೯). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಮೈಸೂರು (ಪಿರಿಯಪ್ಪಣ) ಶಾ.ಸಂ. ೬೩. ಪು.ಸಂ. ೬೬

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.